ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀಮತಿ ವೀಣಾ ಅಚ್ಚಯ್ಯ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 197

ಉತ್ತರಿಸಬೇಕಾದ ದಿನಾಂಕ : 14.12.2021

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಕೊಡಗು ಜಿಲ್ಲೆಯಲ್ಲಿ ಸಂಕಷ್ಟದಲ್ಲಿರುವ ರೈತರಿಗೆ ಪ್ರಸ್ತುತ ವರ್ಷದಲ್ಲಿ ಸಹಕಾರ ಸಂಸ್ಥೆಗಳಿಂದ ಸಾಲ ಮತ್ತು ಸೌಲಭ್ಯಗಳನ್ನು ಒದಗಿಸಲಾಗಿದೆಯೇ;	ಕೊಡಗು ಜಿಲ್ಲೆಯಲ್ಲಿ 2021-22 ನೇ ಸಾಲಿನಲ್ಲಿ ಜಿಲ್ಲೆಯ ಸಹಕಾರ ಸಂಸ್ಥೆಗಳ ಮೂಲಕ ಸಾಲ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.
ಆ)	ಒದಗಿಸಿದ್ದಲ್ಲಿ, ಜಿಲ್ಲೆಯ ಪ್ರತೀ ಸಹಕಾರ ಸಂಸ್ಥೆಗಳ ಮೂಲಕ ವಿತರಣೆಯಾಗಿರುವ ಸಾಲ ಮತ್ತು ಸೌಲಭ್ಯಗಳ ವಿವರಗಳೇನು;	ಕೊಡಗು ಜಿಲ್ಲೆಯಲ್ಲಿನ 73 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಹಾಗೂ ಪಿಕಾರ್ಡ್ ಬ್ಯಾಂಕುಗಳ ಮುಖಾಂತರ ರೈತರಿಗೆ ಈ ಕೆಳಕಂಡ ಸಾಲ ಸೌಲಭ್ಯಗಳನ್ನು ನೀಡಲಾಗುತ್ತಿರುತ್ತದೆ. 1. ಅಲ್ಪಾವಧಿ ಬೆಳೆ ಸಾಲ. 2. ಪಶುಸಂಗೋಪನೆ ಮತ್ತು ಮೀನುಗಾರಿಕೆ ಉದ್ದೇಶಗಳಿಗೆ ಅಲ್ಪಾವಧಿ ಸಾಲ. 3. ಮಧ್ಯಮಾವಧಿ ಕೃಷಿ/ಕೃಷಿ ಸಂಬಂಧಿತ ಸಾಲಗಳಾದ: ತುಂತುರು ನೀರಾವರಿ ಸಾಲ, ಕೃಷಿಯಂತ್ರೋಪಕರಣ ಖರೀದಿ ಸಾಲ, ಟ್ರಾಕ್ಟರ್/ಟಿಲ್ಲರ್ ಖರೀದಿ ಸಾಲ, ಗೋದಾಮು/ಕಣ ನಿರ್ಮಾಣ ಸಾಲ, ಕೆರೆ ನಿರ್ಮಾಣ ಸಾಲ, ಸೋಲಾರ್ ಉಪಕರಣಗಳ ಅಳವಡಿಕೆಗೆ, ಹೆಚ್‌ಡಿಪಿ ಪೈಪ್ ಲೈನ್ ಅಳವಡಿಕೆಗೆ, ಬೋರ್‌ವೆಲ್ ಕೊರೆಯಲು, ಹೈನುಗಾರಿಕೆ/ಮೀನುಗಾರಿಕೆಗಾಗಿ ಮತ್ತು ಹಂದಿ/ಕುರಿ/ಕೋಳಿ ಸಾಗಾಣಿಕೆಗೆ ಪ್ರಾಜೆಕ್ಟ್ ಆಧಾರಿತ ಸಾಲ ನೀಡಲಾಗುತ್ತಿದೆ. 4. ಪಿಕಾರ್ಡ್ ಬ್ಯಾಂಕುಗಳ ಮುಖಾಂತರ ವಿತರಿಸುವ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ/ಕೃಷಿ ಸಂಬಂಧಿತ ಸಾಲಗಳಾದ : ತುಂತುರು ನೀರಾವರಿ ಸಾಲ, ಕೃಷಿಯಂತ್ರೋಪಕರಣ ಖರೀದಿ ಸಾಲ, ಟ್ರಾಕ್ಟರ್/ಟಿಲ್ಲರ್ ಖರೀದಿ ಸಾಲ, ಗೋದಾಮು/ಕಣ ನಿರ್ಮಾಣ ಸಾಲ, ಕೆರೆ ನಿರ್ಮಾಣ ಸಾಲ, ಸೋಲಾರ್ ಉಪಕರಣಗಳ ಅಳವಡಿಕೆಗೆ, ಹೆಚ್‌ಡಿಪಿ ಪೈಪ್ ಲೈನ್ ಅಳವಡಿಕೆಗೆ, ಬೋರ್‌ವೆಲ್ ಕೊರೆಯಲು, ಹೈನುಗಾರಿಕೆ/ಮೀನುಗಾರಿಕೆಗಾಗಿ ಮತ್ತು ಹಂದಿ/ಕುರಿ/ಕೋಳಿ ಸಾಗಾಣಿಕೆಗೆ ಪ್ರಾಜೆಕ್ಟ್ ಆಧಾರಿತ ಸಾಲ ನೀಡಲಾಗುತ್ತಿದೆ.

<table>
<tr><td>ಇ)</td><td>ಪ್ರಸ್ತುತ ವರ್ಷದಲ್ಲಿ ಇದುವರೆಗೂ ಎಷ್ಟು ರೈತರಿಗೆ ಸಾಲದ ಹಣವನ್ನು ಈಗಾಗಲೇ ವಿತರಣೆ ಮಾಡಲಾಗಿದೆ;</td><td>ಕೊಡಗು ಜಿಲ್ಲೆಯಲ್ಲಿ 2021–22ನೇ ಸಾಲಿನ 30.11.2021 ರ ಅಂತ್ಯದವರೆಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಹಾಗೂ ಪಿಕಾರ್ಡ್ ಬ್ಯಾಂಕುಗಳ ಮುಖಾಂತರ ರೈತರಿಗೆ ವಿತರಿಸಿರುವ ಸಾಲದ ವಿವರ ಈ ಕೆಳಕಂಡಂತಿರುತ್ತದೆ.

<table>
<tr><th>ಕ್ರ.ಸಂ.</th><th>ಸಾಲದ ವಿಧ</th><th>ರೈತರ ಸಂಖ್ಯೆ</th><th>ಸಾಲದ ಮೊತ್ತ (ರೂ.ಲಕ್ಷಗಳಲ್ಲಿ)</th></tr>
<tr><td>1</td><td>ಅಲ್ಪಾವಧಿ ಬೆಳೆ ಸಾಲ</td><td>35,075</td><td>57,444.64</td></tr>
<tr><td>2</td><td>ಮಧ್ಯಮಾವಧಿ ಕೃಷಿ/ಕೃಷಿ ಸಂಬಂಧಿತ ಸಾಲ</td><td>667</td><td>2341.40</td></tr>
<tr><td>3</td><td>ಪಿಕಾರ್ಡ್ ಬ್ಯಾಂಕ್ ಮುಖಾಂತರ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ/ಕೃಷಿ ಸಂಬಂಧಿತ ಸಾಲ</td><td>590</td><td>643.38</td></tr>
<tr><td></td><td>ಒಟ್ಟು</td><td>36,332</td><td>60,429.42</td></tr>
</table></td></tr>
<tr><td>ಈ</td><td>ಜಿಲ್ಲೆಯಲ್ಲಿ ಸಂಕಷ್ಟದಲ್ಲಿರುವ ರೈತರಿಗೆ ಸಹಕಾರ ಸಂಸ್ಥೆಗಳಿಂದ ದೊರೆತಿರುವ ಇತರೆ ನೆರವು ಮತ್ತು ಸೌಲಭ್ಯಗಳೇನು?</td><td>ಜಿಲ್ಲೆಯಲ್ಲಿ ಸಂಕಷ್ಟದಲ್ಲಿರುವ ರೈತರಿಗೆ ಸಹಕಾರ ಸಂಸ್ಥೆಗಳಿಂದ ಈ ಕೆಳಕಂಡ ಸೌಲಭ್ಯಗಳು ದೊರೆಯುತ್ತವೆ.
1. ರಾಜ್ಯ ಸರ್ಕಾರದ ಬಡ್ಡಿ ರಿಯಾಯಿತಿ ಬದ್ಧತೆಯಡಿ ರೂ.3.00 ಲಕ್ಷಗಳವರೆಗಿನ ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಮುಖಾಂತರ ಅಲ್ಪಾವಧಿ ಬೆಳೆ ಸಾಲ / ಅಲ್ಪಾವಧಿ ಕೃಷಿ ಸಾಲವನ್ನು "ಶೂನ್ಯ" ಬಡ್ಡಿ ದರದಲ್ಲಿ ನೀಡಲಾಗುತ್ತಿದ್ದು, ರೂ.10.00 ಲಕ್ಷಗಳವರೆಗಿನ ಮಧ್ಯಮಾವಧಿ/ದೀರ್ಘಾವಧಿ ಕೃಷಿ/ಕೃಷಿ ಸಂಬಂಧಿತ ಸಾಲವನ್ನು ಶೇ.3 ರ ಬಡ್ಡಿ ದರಲ್ಲಿ ನೀಡುವ ಮುಖಾಂತರ ರೈತರ ಸಾಲ ನೀಡಿಕೆಯಲ್ಲಿ ರಾಜ್ಯ ಸರ್ಕಾರವು ಬಡ್ಡಿ ರಿಯಾಯಿತಿಯನ್ನು ಒದಗಿಸುವ ಮುಖಾಂತರ ರೈತರಿಗೆ ನೆರವು ನೀಡಲಾಗುತ್ತಿದೆ.
2. ರಾಜ್ಯ ಸರ್ಕಾರದ ಬಡ್ಡಿ ರಿಯಾಯಿತಿ ಬದ್ಧತೆಯಡಿ ರೂ.10.00 ಲಕ್ಷಗಳವರೆಗಿನ ಪಿಕಾರ್ಡ್ ಬ್ಯಾಂಕುಗಳ ಮುಖಾಂತರ ಮಧ್ಯಮಾವಧಿ/ದೀರ್ಘಾವಧಿ ಕೃಷಿ/ಕೃಷಿ ಸಂಬಂಧಿತ ಸಾಲವನ್ನು ಶೇ.3 ರ ಬಡ್ಡಿದರಲ್ಲಿ ನೀಡುವ ಮುಖಾಂತರ ರೈತರ ಸಾಲ ನೀಡಿಕೆಯಲಿ ್ಲರಾಜ್ಯ ಸರ್ಕಾರವು ಬಡ್ಡಿ ರಿಯಾಯಿತಿಯನ್ನು ಒದಗಿಸುವ ಮುಖಾಂತರ ರೈತರಿಗೆ ನೆರವು ನೀಡಲಾಗುತ್ತಿದೆ.</td></tr>
</table>

ಸಂಖ್ಯೆ: ಸಿಒ 359 ಸಿಎಲ್‌ಎಸ್ 2021

(ಎಸ್.ಟಿ. ಸೋಮಶೇಖರ್)

ಸಹಕಾರ ಸಚಿವರು